# ಬದಲಾಗುತ್ತಿರುವ ಕೌಟುಂಬಿಕ ಜೀವನಕ್ಕೆ ಆಧ್ಯಾತ್ಮಿಕ ಮೌಲ್ಯಗಳು

ಸ್ವಾಮಿ ಶಿವಕಾಂತಾನಂದ

ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದ ಸಾಮಾಜಿಕ ಸ್ಥಿತಿಗತಿಗಳಲ್ಲಿ ಉಂಟಾಗುತ್ತಿರುವ ಮೂಲಭೂತ ಬದಲಾವಣೆಗಳು ನಮ್ಮ ಸಂಸ್ಕೃತಿಯ ಅಸ್ತಿತ್ವಕ್ಕೇ ಹಾನಿ ಮಾಡುವ ಗತಿಯಲ್ಲಿ ಮುಂದುವರಿಯುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಸಂಸ್ಕೃತಿ, ಮೌಲ್ಯ, ಆದರ್ಶಗಳ ರಕ್ಷಣೆಗೆ ಮಾರ್ಗವೇನು ಎಂಬ ವಿಚಾರವನ್ನು ನಾವೆಲ್ಲರೂ ಗಂಭೀರವಾಗಿ ಚಿಂತಿಸಬೇಕಾಗಿದೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಂಚಾಲಕರಾಗಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರು.

ಜಗತ್ತಿನ ಧಾರೆಯನ್ನೇ ಬದಲಿಸಿದ ಎರಡು ಪ್ರಮುಖ ಕ್ರಾಂತಿಗಳು ಸಾಮಾಜಿಕ ಮತ್ತು ಕೈಗಾರಿಕಾ ಕ್ರಾಂತಿ. ಮೊದಲನೆಯದು, ೧೭೭೬ರಿಂದ ಪ್ರಜಾಪ್ರಭುತ್ವಕ್ಕಾಗಿ ನಡೆದ ಅಮೆರಿಕ ಕ್ರಾಂತಿ ಹಾಗೂ ೧೯೧೭ರಲ್ಲಿ ಮಾರ್ಕ್ಸಿಸಮ್ ಮತ್ತು ಕಮ್ಯೂನಿಸಂನಿಂದ ಉಂಟಾದ ರಷ್ಯಾಕ್ರಾಂತಿ. ಇಂತಹ ಅನೇಕ ಘಟನೆಗಳು ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳನ್ನು ತಂದವು. ಎರಡನೆಯದು, ವಿಜ್ಞಾನದ ಆವಿಷ್ಕಾರಗಳನ್ನು ಸಂಶೋಧನೆ ಮತ್ತು ಪ್ರಯೋಗಗಳಿಗೆ ಸೀಮಿತಗೊಳಿಸದೆ, ಅವುಗಳನ್ನು ಜೀವನದ ಗುಣಮಟ್ಟವನ್ನು ಸುಧಾರಿಸಲು ಆರಂಭವಾದ ತಂತ್ರಜ್ಞಾನ (technology). ೧೮೧೬ರಲ್ಲಿ ಜೇಕಬ್ ಬಿಗಲೊ (Jacob Bigelow, Harvard University) ಎಂಬುವವನು ತಂತ್ರಜ್ಞಾನ ಎಂಬ ಶಬ್ದವನ್ನು ಮೊದಲು ಉಪಯೋಗಿಸಿದನು. ಅವನು The application of science to the useful arts ಎಂಬ ಶೀರ್ಷಿಕೆಯಡಿ ಉಪನ್ಯಾಸ ಮಾಡುವಾಗ ವಿಜ್ಞಾನದ ಉಪಯುಕ್ತತೆಯನ್ನು ವ್ಯಕ್ತಪಡಿಸುವುದಕ್ಕಾಗಿ ಈ ಪದವನ್ನು ಉಪಯೋಗಿಸಿದನು.

ಈ ಎರಡು ತಿರುವುಗಳು ಜಗತ್ತಿನ ಚಿತ್ರಣವನ್ನು ಬದಲಿಸಿದ್ದಷ್ಟೇ ಅಲ್ಲದೆ, ಜಾಗತಿಕತೆಯನ್ನು ಸೃಷ್ಟಿಸಿ, ವಿಶ್ವಾದ್ಯಂತ ಮಹತ್ತರವಾದ ಸುಧಾರಣೆಗಳನ್ನು ತಂದವು. ಇಡೀ ವಿಶ್ವವನ್ನು ಒಂದು ಹಳ್ಳಿಯನ್ನಾಗಿ ಪರಿವರ್ತಿಸಿತು. ಯಾವಾಗ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವುದರಿಂದ ರಾಷ್ಟ್ರೋನ್ನತಿ ಆಗುತ್ತಿರುವುದನ್ನು ಸರ್ಕಾರಗಳು ಕಂಡುಕೊಂಡವೋ, ಸಂಶೋಧನೆ- ತಂತ್ರಜ್ಞಾನ -ಕೈಗಾರಿಕೆಗಳಿಗೆ ಆರ್ಥಿಕ ಸಂಪನ್ಮೂಲಗಳು ಹರಿಯಲಾರಂಭಿಸಿದವು.

### ಕೈಗಾರಿಕಾ ಮತ್ತು ಸಂಪರ್ಕ ಕ್ರಾಂತಿ ಹಾಗು ವಲಸೆಯಿಂದ ನಾಗರಿಕತೆಯ ಪರಿವರ್ತನೆ

ಒಂದು ದೇಶದ ಘಟಕ ಸಮಾಜ, ಸಮಾಜದ ಘಟಕ ಕುಟುಂಬ. ಕುಟುಂಬಗಳ ಆರ್ಥಿಕ ವ್ಯವಸ್ಥೆ ಮತ್ತು ಮೌಲ್ಯ ಜೀವನ, ಸಮಾಜದ ಹಾಗೂ ದೇಶದ ಆರ್ಥಿಕ ಮತ್ತು ನೈತಿಕ ಸ್ಥಿತಿಯನ್ನು ಬಿಂಬಿಸುತ್ತದೆ. ಇಂದು ತಂತ್ರಜ್ಞಾನದ ಯುಗದಲ್ಲಿ ಎಲ್ಲವೂ ತ್ವರಿತಗತಿಯಲ್ಲಿ ಬದಲಾಗುತ್ತಿವೆ. ಈ ಬದಲಾವಣೆಗಳು ಕೌಟುಂಬಿಕ ವ್ಯವಸ್ಥೆಯ ಮೇಲೂ ತಮ್ಮ ಛಾಪನ್ನು ಮೂಡಿಸಿವೆ. ಅದರಿಂದ ಸಂಬಂಧಗಳೊಡನೆ ವೈಯುಕ್ತಿಕ ನಡವಳಿಕೆಯನ್ನು ಬದಲುಮಾಡುತ್ತಿವೆ. ಪುರಾತನ ಧಾರ್ಮಿಕ, ನೈತಿಕ ಅನುಸರಣೆಗಳಿಗೆ ಒತ್ತು ಸಡಿಲವಾಗುತ್ತಾ ಸ್ವಾತಂತ್ರ್ಯದ ಮತ್ತು ದಾಸಮುಕ್ತ ಜೀವನದ ನೆಪದಲ್ಲಿ ಅನೇಕ ಮಾರ್ಪಾಡುಗಳು ಆಗುತ್ತಿವೆ. ಕೈಗಾರಿಕಾ ಕ್ರಾಂತಿಯು ಗ್ರಾಮೀಣ ಕೃಷಿ-ಉದ್ಯಮಗಳನ್ನು ಕುಗ್ಗಿಸಿ ನಗರದ ಕಡೆ ಜನ ವಲಸೆ ಹೋಗುವಂತೆ ಮಾಡಿತು. ಕೈಗಾರಿಕಾ ಕ್ರಾಂತಿಯ ನಂತರ ಆದ ವಲಸೆಗಳು, ಅವಿಭಕ್ತ ಕುಟುಂಬ (Joint Family System) ಅಷ್ಟೇ ಅಲ್ಲ, ಪತಿ-ಪತ್ನಿ ಮಕ್ಕಳನ್ನೂ ಸಹ ಬೇರ್ಪಡಿಸಿದವು. ಹೊಸ ಸ್ಥಳ, ಹೊಸ ಜನರೊಡನೆ ಬೆರೆತು, ತನ್ನತನವನ್ನು ತೊಡೆದು ಹೊಸತನವನ್ನು ಪಡೆದುಕೊಂಡರು. ಅಲ್ಲಿಯ ಮಣ್ಣನ್ನೊ, ಜನರನ್ನೊ ತನ್ನ ಸ್ವದೇಶ, ಸ್ವಜನರನ್ನಾಗಿ ಮಾಡಿಕೊಂಡು ಜೀವನ ನಡೆಸುವ ಒಂದು ಹೊಸ ರೀತಿ ಆರಂಭವಾಯಿತು. ಇದು ಹೊರ ರಾಜ್ಯ, ವಿದೇಶಗಳಿಂದ ಬಂದ ಜನರು ಸ್ಥಳೀಯರ ಜೊತೆ ಬೆರೆತು, ಜನಾಂಗದ ವಿನಿಮಯಕ್ಕೆ (Racial mixing) ಕಾರಣವಾಯಿತು. ಇದರ ಪರಿಣಾಮ, ಶತಮಾನಗಳು ಜಾತಿ-ಜನಾಂಗ (racial and ethnical) ಆಧಾರಿತ ಕೌಟುಂಬಿಕ ಹಾಗೂ ಸಾಮಾಜಿಕ ರೀತಿಯ ಬದಲಾವಣೆಗೆ ಕಾರಣವಾಯಿತು. ಮುಂದುವರಿದ ದೇಶಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯ, ವಿದ್ಯಾಭ್ಯಾಸದ ಹಕ್ಕು, ಬದುಕುವ ಹಕ್ಕು, ಸ್ತ್ರೀ ಸಮಾನತೆ ಇವುಗಳು ಕೌಟುಂಬಿಕ ಬದುಕಿನಲ್ಲಿದ್ದ ಪುರಾತನ ಬಿಗಿ ಕಟ್ಟುಪಾಡುಗಳ ಹಿಡಿತವನ್ನು ದುರ್ಬಲಗೊಳಿಸಿದವು. ಸ್ತ್ರೀ ಸಬಲೀಕರಣದಿಂದ ಮುಖ್ಯವಾಗಿ ಮಹಿಳೆಯರು ಎದುರಿಸುತ್ತಿದ್ದ ದೌರ್ಜನ್ಯ, ಅಸಮಾನತೆ, ವಿದ್ಯಾಭ್ಯಾಸ ಹಾಗು ಉದ್ಯೋಗ ವಂಚಿತ ಸ್ಥಿತಿಯಿಂದ ಹೊರಬರಲು ಸಾಧ್ಯವಾಯಿತು. ಧರ್ಮ, ಮನೆತನ, ಜಾತೀಯತೆ, ವಧು ಆಯ್ಕೆ, ಅವಕಾಶ ಇಲ್ಲದ ವೈವಾಹಿಕ ಕಟ್ಟು

ಪಾಡುಗಳ ಪ್ರಭಾವ ಕಡಿಮೆಯಾಗಿ, ವ್ಯಕ್ತಿ ಹಾಗು ಸಾಮಾಜಿಕ ಸ್ವಾತಂತ್ರ್ಯ ಹೆಚ್ಚಾಯಿತು. ಹೀಗೆ ವಲಸೆ ಹೋದ ಜನ ಅವಕಾಶ ದೊರೆತಾಗ ತಮ್ಮವರನ್ನು ಕಾಣಲು ಆಗಾಗ ಊರಿಗೆ ಹೋಗುವ ಪರಿಪಾಟ ಶುರುವಾಯಿತು. ಇಂದು ದೊಡ್ಡವರು, ಮಕ್ಕಳು ಕಛೇರಿಗಳಲ್ಲಿ, ಶಾಲೆಗಳಲ್ಲಿ ಅನೇಕ ಸಮಯವನ್ನು ಕಳೆದು ಉಳಿದ ಅಲ್ಪಸಮಯವನ್ನು ಕುಟುಂಬದ ಸದಸ್ಯರ ಜೊತೆ ಕಳೆಯುತ್ತಾರೆ. ಹೀಗಾಗಿ ಹಳೆಯ ಕಾಲದ ಕೌಟುಂಬಿಕ ಅನು ಬಂಧವು ಕ್ಷೀಣಿಸುತ್ತಿದೆ. ಇಂದಿನ ಯುವಕ-ಯುವತಿಯರಿಗೆ ಬಂಧುಗಳ ಮಧ್ಯೆ ಪ್ರೀತಿ-ವಿಶ್ವಾಸ ಕಡಿಮೆಯಾಗಿದೆ. ಬದಲಾಗಿ ಅವರ ಸ್ನೇಹಿತರ ಜೊತೆ, ಅವರು ಇಷ್ಟಪಡುವವರ ಜೊತೆ ಬೆಸುಗೆ ಹೆಚ್ಚುತ್ತಿದೆ. ವಿವಾಹದ ಮೊದಲು ಇಬ್ಬರಿಗೂ ಉದ್ಯೋಗ ದೊರಕಬೇಕು. ನಂತರ ಸ್ವಲ್ಪ ಕಾಲ ಸ್ವೇಚ್ಛಾಚಾರಿಯಾಗಿ ಜೀವನ ವನ್ನು ತಮಗೆ ಇಷ್ಟ ಬಂದಂತೆ ಅನುಭವಿಸಬೇಕು. ಸಂಪತ್ತನ್ನು ಗಳಿಸಿದ ಮೇಲೇ ವಿವಾಹ ಮಾಡಿಕೊಳ್ಳಬೇಕು ಎಂಬ ಆಲೋಚನೆ ಇಂದು ದಟ್ಟವಾಗಿ ಬೆಳೆದಿದೆ. ಇದರಿಂದ ಇಂದಿನ ಕಾಲವು ವಿವಾಹವೆಂಬ ನಿರ್ಬಂಧವಿಲ್ಲದ, ನಾನಾ ರೀತಿಯ ವಿವಾಹದ ಮುಂಚಿನ ನಡವಳಿಕೆಗಳಿಗೆ ಅವಕಾಶಗಳನ್ನು ನೀಡುತ್ತಿದೆ. ಅಲ್ಲದೆ ತಮ್ಮ ಕುಟುಂಬದಿಂದ ದೂರವಾಗಿ ದೇಶವಿದೇಶಗಳಲ್ಲಿ ಉದ್ಯೋಗ ಮಾಡುತ್ತಿರುವ ವಯಸ್ಕರಿಗೆ ತಮ್ಮ ಮುಂದಿನ ವಿವಾಹ ಜೀವನ ಬೇಕೊ ಬೇಡವೋ ಎಂಬ ಆಯ್ಕೆಯು ವೈಯುಕ್ತಿಕ ಸ್ವಾತಂತ್ರ್ಯ ವಾಗಿದೆ.

### ಆಧುನಿಕತೆಯ ಸತ್ಪರಿಣಾಮ ವಿಶ್ವವಿಕಾಸ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸರ್ವತೋಮುಖ ಬಾಹ್ಯಾಭಿವೃದ್ಧಿ

ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ ಒಂದು ಉತ್ತಮ ಅಂಶ ವೆಂದರೆ, ಮಾನವನಿಗೆ ದೊರೆಯುತ್ತಿರುವ ಅವಕಾಶ ಮತ್ತು ಸ್ವಾತಂತ್ರ್ಯ. ತನ್ನ ವಿದ್ಯೆ ಮತ್ತು ಪ್ರತಿಭೆಯ ಮೂಲಕ ಪ್ರಪಂಚದ ಶ್ರೇಷ್ಠ ವಿಶ್ವವಿದ್ಯಾನಿಲಯ-ಸಂಸ್ಥೆಗಳಲ್ಲಿ ಪ್ರವೇಶ ಮಾಡಬಹುದು. ಅಲ್ಲಿರುವ ಪ್ರತಿಭೆಗಳೊಡನೆ ಬೆರೆತು ನೂತನ ಆವಿಷ್ಕಾರ, ಮುಂತಾದ ಪುರೋಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡು ಸ್ವ-ಕೀರ್ತಿಯನ್ನೂ ವಿಶ್ವ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ಗಳನ್ನು ನೀಡುತ್ತಾ, ತನಗೂ ತನ್ನನ್ನು ಹೆತ್ತವರಿಗೂ, ಜೀವನ ಸಂಗಾತಿಗೂ ಕೀರ್ತಿ ಮತ್ತು ಐಶ್ವರ್ಯಗಳನ್ನು ಗಳಿಸಲು ಎಲ್ಲ ವಿಧದ ವ್ಯವಸ್ಥೆಯೂ ಇದೆ. ವಿವಿಧ ವಿದ್ಯಾಭ್ಯಾಸ ಮತ್ತು ಪ್ರತಿಭೆ, ಕಲಾ ಸಾಮರ್ಥ್ಯವುಳ್ಳ ಜನರು ಒಟ್ಟಾಗಿ ಜಾಗತಿಕ ಅಭಿವೃದ್ಧಿಗೆ ಹೆಗಲು ನೀಡುತ್ತಿದ್ದಾರೆ. ಜ್ಞಾನಾರ್ಜನೆ, ಹಳೆಯ ನಂಬಿಕೆಗಳ ತೀವ್ರ ವಿಮರ್ಶೆ, ಸರ್ವರ ಆರಾಮಕ್ಕಾಗಿ ಸುಖಕ್ಕಾಗಿ ಸೌಕರ್ಯ ನಿರ್ಮಾಣ, ಪರಸ್ಪರ ಒಡಂಬಡಿಕೆಗಳು, ನವೀನ ಆಲೋಚನೆ ಇವುಗಳು ಪ್ರಸ್ತುತ ಸಮಾಜದ ಗುರುತಾಗಿದೆ. ಈ ರೀತಿಯ ವಿನಿಮಯವನ್ನು ಬಳಸಿಕೊಂಡು ಮುಂದುವರೆಯುತ್ತಿರುವ ಜನರು ಮತ್ತು ದೇಶ ಅಸಂಖ್ಯ. ಒಂದು ಹಗ್ಗದಲ್ಲಿರುವ ಅನೇಕ ನಾರಿನಂತೆ, ಎಲ್ಲರೂ ಕೂಡಿ ಸಮೂಹ ಯೋಜನೆ ಮತ್ತು ನಿರ್ದಿಷ್ಟ ಗುರಿಯನ್ನಿಟ್ಟುಕೊಂಡು ಮಹತ್ತರ ಕಾರ್ಯಗಳನ್ನು ಅನಾಯಾಸವಾಗಿ ಪೂರ್ಣಗೊಳಿಸುವುದನ್ನು ಕಾಣುತ್ತೇವೆ. ಈ ಸಮೂಹ ಶಕ್ತಿಯ ಯೋಗದಾನದ ನಡುವೆಯೂ ತಮ್ಮ ವೈಯ ಕ್ತಿಕ ವ್ಯಕ್ತಿತ್ವ, ಆಲೋಚನೆ ಮತ್ತು ಭೋಗ ಸ್ವಾತಂತ್ರ್ಯಕ್ಕೂ ಕೂಡ ಸಮಯ ಮತ್ತು ಸ್ವಾತಂತ್ರ್ಯಗಳಿಗೂ ಅವಕಾಶವಿದೆ. ಇಂತಹ ಒಂದು ವ್ಯವಸ್ಥೆ ಹಿಂದೆ ಚರಿತ್ರೆಯಲ್ಲಿ ಎಂದಿಗೂ ಇರಲಿಲ್ಲವೆಂದೇ ಹೇಳಬೇಕು.

### ಹೊಸತನದ ಅಲೆಯ ಆಘಾತ ಮತ್ತು ಹಳೇ ಕಟ್ಟುಪಾಡು ಗಳು, ಧರ್ಮ, ನಂಬಿಕೆಗಳ ಶಿಥಿಲತೆ

ಜನರಿಗೆ ವಾಹನ ಸೌಲಭ್ಯ ಹಾಗು ಸಂಪರ್ಕಗಳು ಹೆಚ್ಚಾಗಿವೆ. ೧೯೨೦ರ ದಶಕದಿಂದ ರೇಡಿಯೋ, ೧೯೮೦ರಿಂದ ಟಿವಿ, ೨೦೦೦ನೇ ಇಸವಿಯಿಂದ ಇಂಟರ್ನೆಟ್, ಸೋಶಿಯಲ್ ಮೀಡಿಯ ಪ್ರಭಾವಗಳು ಸಾಮಾಜಿಕ ಮತ್ತು ಕೌಟುಂಬಿಕ ಸ್ತರ ಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಇವುಗಳ ಮೂಲಕ ಆದ ಪರಿಚಯವೇ ಮುಂದೆ ಸ್ನೇಹ ಸಂಬಂಧಕ್ಕೂ ನಾಂದಿಯಾಗು ತ್ತಿದೆ. ಇಂತಹ ಬದಲಾವಣೆಗಳು ಯಾವ ಕಡೆಗೆ ಜಗತ್ತನ್ನು ಕೊಂಡೊಯ್ಯುವುದೋ ಎಂದೆನಿಸುತ್ತದೆ. ನಮ್ಮ ಅನಿಸಿಕೆಗಳ ಪ್ರಕಟಣೆಗೆ ರೇಡಿಯೊ, ಪತ್ರಿಕೆ ಮತ್ತು ದೃಶ್ಯ ಮಾಧ್ಯಮಗಳ ಅವಶ್ಯವಿಲ್ಲದೆ ಯಾವುದೇ ಖರ್ಚಿಲ್ಲದೆ ಸೋಷಿಯಲ್ ಮೀಡಿಯಾ ದಲ್ಲಿ ಪ್ರಕಟಿಸಬಹುದಾದ್ದರಿಂದ ಸಾಮಾನ್ಯ ಜನರಿಗೂ ವರ್ತ ಮಾನದ ಘಟನೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಮಂಡಿಸಿ ಆಂದೋಲನಗಳನ್ನುಂಟು ಮಾಡುವ ಒಂದು ವೇದಿಕೆ ಸಿಕ್ಕಿದೆ. ಇಂತಹ ಬದಲಾವಣೆಗಳು ಕೇವಲ ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲದೆ, ಸಂಪ್ರದಾಯ, ಧರ್ಮ ಮತ್ತು ಭಗವಂತನ ಸಾಕ್ಷಾತ್ಕಾರವೇ ಉಸಿರಾದ ಭಾರತದಂತಹ ದೇಶಗಳಿಗೂ ತೀವ್ರ ಪರಿಣಾಮ ಬೀರುತ್ತಿದೆ ಎಂಬುದು ಗಮನಿಸಬೇಕಾದ ಅಂಶ.

### ಮುಂದುವರಿಯುತ್ತಿರುವ ಜನಾಂಗ ಮತ್ತು ಪ್ರಬುದ್ಧ ಕಾನೂನು ವ್ಯವಸ್ಥೆಯ ಪರಿಕಲ್ಪನೆ

ಬದಲಾಗುತ್ತಿರುವ ಕುಟುಂಬ ಸಂಬಂಧ ಮತ್ತು ಪ್ರಬುದ್ಧ ನಾಗರಿಕತೆಗೆ ಅನುಗುಣವಾಗಿ ಅಪರಾಧ ಕಾನೂನುಗಳೂ (deterrence and penal provision) ಬದಲಾಗುತ್ತಿವೆ. ಬದಲಾಗುತ್ತಿರುವ ಕುಟುಂಬ ವ್ಯವಸ್ಥೆ, ಸಂಗಾತಿಯೊಡನೆ ಯಾವ ರೀತಿ ಬಾಳಬೇಕೆಂಬ, ಪರಸ್ಪರ ಒಪ್ಪಂದಕ್ಕೆ ಹೊಸ ಕಾನೂನುಗಳಲ್ಲಿ ನೀಡಿರುವ ಅವಕಾಶ ಮುಂತಾದವು ಇದಕ್ಕೆ ಸಾಕ್ಷಿಯಾಗಿದೆ. ಕೇವಲ ಸ್ವಂತ ಆಯ್ಕೆಯ ಮೇಲೆ ಅವಲಂಬಿತವಾಗಿರುವ ಸ್ತ್ರೀ-ಪುರುಷ ಸಂಬಂಧ ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ಕಾಣು ತ್ತೇವೆ. ಸಮಾಜದಲ್ಲಿ ಈಗ ಘೋರ ತಪ್ಪು ಮಾಡಿದಾಗ ಅಂತಹ ಘೋರ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆಂಬ ಭಯವನ್ನು

ಉಂಟುಮಾಡುವುದಕ್ಕಾಗಿ ಒಬ್ಬನಿಗೆ ಗಲ್ಲು ವಿಧಿಸುವುದು, ಇತ್ಯಾದಿ ಕಡಿಮೆಯಾಗಬಹುದು. ಆಗ ಲಕ್ಷಕ್ಕೊಬ್ಬರು ಬಿಟ್ಟು ಉಳಿದವರಾರೂ ಅಂತಹ ಪ್ರಯತ್ನಕ್ಕೆ ಕೈಹಾಕುವುದಿಲ್ಲ. ಇನ್ನು ಮುಂದೆ ನಾವು ಅಕಸ್ಮಾತ್ ಆದ ಅಪರಾಧಕ್ಕೆ ಅಂತಹವರನ್ನು ಕ್ಷಮಿಸಿ ಅವನನ್ನು ಮಾರ್ಪಾಟು (reformatory) ಕೇಂದ್ರ ಗಳಲ್ಲಿಟ್ಟರೂ, ಬುದ್ಧಿವಂತರಾದ ಇಂದಿನ ಜನರು ಅಂತಹ ಕಾರ್ಯಗಳಿಗೆ ಗಲ್ಲು ಶಿಕ್ಷೆಯನ್ನು (capital punishment) ನೀಡುವ ಆವಶ್ಯಕತೆ ಇಲ್ಲ ಎಂದು ಹೇಳಬಹುದು. ಬುದ್ಧಿವಂತ ಸಮಾಜದಲ್ಲಿ ಸಹಜವಾಗಿಯೇ ಅಪರಾಧ ತಡೆ ಕಾನೂನುಗಳ ತೀವ್ರತೆಯನ್ನು ಕಡಿಮೆ ಮಾಡುವೆಡೆಗೆ ಮಾರ್ಪಾಟನ್ನೂ ಮಾಡುವ ಆವಶ್ಯಕತೆಯನ್ನು ಆಡಳಿತ ಮಂಡಳಿಗಳು ಚಿಂತಿಸು ತ್ತವೆ. ಆಡಳಿತ ಯಂತ್ರ, ರಾಜಕೀಯ ಮತ್ತು ನ್ಯಾಯವ್ಯವಸ್ಥೆ ಯಲ್ಲಿರುವ ದೋಷ, ಅನಾಚಾರ ಮತ್ತು ಭ್ರಷ್ಟಾಚಾರಗಳ ಸತ್ಯಾ ಸತ್ಯತೆ ಈಗ ಮಾಧ್ಯಮ ಮತ್ತು RTI ಮೂಲಕ ಹೊರಬರುತ್ತಿದೆ. ಇವುಗಳನ್ನು ಸರಿಪಡಿಸಲು ಎಲ್ಲ ದೇಶಗಳಲ್ಲಿಯೂ ಆಂದೋಲನ ಗಳು ಉಂಟಾಗುತ್ತಿವೆ.

### ಮುಕ್ತ ಸಮಾಜದ ದುಷ್ಪರಿಣಾಮ ಮಾನವ ಜೀವನದ ನಿಜವಾದ ಗುರಿಯಿಂದ ವಿಮುಖತೆ

ಹಲವರು ಹೇಳುತ್ತಾರೆ, ಈ ಎಲ್ಲ ಸುಧಾರಣೆಗಳು ಚೆನ್ನಾಗಿದೆ ಎಂದು ಹೇಳಲಾಗುವುದಿಲ್ಲ. ಆಧುನಿಕತೆಯು ಬಲಿಷ್ಠ ರಾಷ್ಟ್ರಗಳ ರಾಜಕೀಯ, ಮಾರುಕಟ್ಟೆ ಮತ್ತು ಆರ್ಥಿಕ ದಬ್ಬಾಳಿಕೆಯನ್ನು ಹಿಂದುಳಿದ ರಾಷ್ಟ್ರಗಳ ಮೇಲೆ ಹೇರಿದೆ. ಉನ್ನತ ಚಿಂತನೆ ಮತ್ತು ಮೌಲ್ಯಗಳ ಮೇಲಿದ್ದ ನಂಬಿಕೆಗಳನ್ನು ಆಧುನಿಕತೆಯ ಖಡ್ಗದಿಂದ ನುಚ್ಚು ನೂರು ಮಾಡಿದೆ. ಕೌಟುಂಬಿಕ ಸ್ತರದಲ್ಲಿ ತಂದೆ-ತಾಯಿ ಗಳ ಮೇಲೆ ತಾತ್ಸಾರ, ವೈವಾಹಿಕ ಜೀವನದಲ್ಲಿ ಅನಾಸಕ್ತಿ, ಕೆಲವು ವರ್ಷಗಳಲ್ಲಿಯೇ ವಿಚ್ಛೇದನ, ಮಕ್ಕಳಿಗಾಗಿ ಆದರ್ಶ ಜೀವನದ ಕೊರತೆ ಮತ್ತು ಕುಟುಂಬಕ್ಕಾಗಿ ತ್ಯಾಗಹೀನತೆ, ವಿವಾಹವಿಲ್ಲ ದೆಯೇ ಜೊತೆಗಿರುವ ಹಿಪ್ಪಿ ತರಹದ ಸಂಸ್ಕೃತಿ. ಲಿಂಗ, ವಯೋ ಮಾನತೆ ಮುಂತಾದ ವಿಮರ್ಶೆ, ಕಡಿವಾಣವಿಲ್ಲದ ಸ್ವೇಚ್ಛಾಚಾರ, ವಿಪರೀತ ದುಡಿಮೆ, ಅನಾವಶ್ಯಕ ಸಂಚಯ, ವಾಮಮಾರ್ಗದಲ್ಲಿ ಗಳಿಕೆ, ಭ್ರಷ್ಟಾಚಾರ ಮುಂತಾದ ಸಮಸ್ಯೆಗಳನ್ನು ಹುಟ್ಟುಹಾಕಿದೆ. ಇದರಿಂದ ಅನೇಕರು ಮಾನಸಿಕ ಹಾಗೂ ದೈಹಿಕ ಕಾಯಿಲೆಗಳಿಂದ ಅಲ್ಪವಯಸ್ಸಿನಲ್ಲಿಯೇ ಬಳಲುವಂತಹ ಸ್ಥಿತಿಯು ಸೃಷ್ಟಿಯಾಗಿದೆ. ಇಂದು ಜಗತ್ತನ್ನು ವೈದ್ಯಕೀಯ, ಗಣಕಯಂತ್ರ, ಅಂತರ್ಜಾಲ ಗಳು ವ್ಯಾಪಿಸಿವೆ. ವಿಜ್ಞಾನವು ರೊಬಾಟಿಕ್, ಸೂಪರ್ ಕಂಪ್ಯೂ ಟರ್, ಅಂತರಿಕ್ಷ ಅನ್ವೇಷಣೆಯ ಸಾಧನೆಯ ತುತ್ತ ತುದಿಯಲ್ಲಿ ದ್ದರೂ ಅದು ಮಾನವನ ಮೂಲ ಆವಶ್ಯಕತೆಯಾದ ಶಾಂತಿ ನೆಮ್ಮದಿಯನ್ನು ಸಾಧಿಸುವತ್ತ ಒಯ್ಯುತ್ತಿಲ್ಲ. ಚಾರಿತ್ರ್ಯ ನಿರ್ಮಾಣ, ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು, ಮುಂತಾದ ಉದಾತ್ತ ಗುಣಗಳನ್ನು ಬದಿಗಿಟ್ಟು ಇಂದ್ರಿಯ ಲೋಲುಪತೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡುವಲ್ಲಿ ವಿಜ್ಞಾನ-ತಂತ್ರಜ್ಞಾನಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಇದು ಇಂದ್ರಿಯ ಹಾಗು ಮಾನ ಸಿಕ ಬಲಗಳನ್ನು ಕ್ಷೀಣಿಸಿ ದುಃಖದೆಡೆಗೇ ಕೊಂಡುಹೋಗುತ್ತಿದೆ ಎಂಬುದು ಇಂದು ಎಲ್ಲರಿಗೂ ತಿಳಿದ ವಿಷಯ. ಇದಷ್ಟೇ ಅಲ್ಲದೆ ತಮ್ಮ ನರಮಂಡಲಗಳನ್ನು ದುರ್ಬಲಗೊಳಿಸುವ ಹಗಲು ರಾತ್ರಿ ಯೆನ್ನದೆ ದುಡಿಯುತ್ತಿರುವ ಇಂದಿನ ಜನರನ್ನು ತುಷ್ಟಿಗೊಳಿಸಲು ಅನೇಕ ರೀತಿಯ ಮಾಧ್ಯಮ, ವಾರದ ಕೊನೆಗೆ ಮೋಜಿನ ಕೇಂದ್ರಗಳು, ರೆಸಾರ್ಟ್, ಸಮುದ್ರ ತೀರ, ಕೆಲಸವಿಲ್ಲದ ಕೆಲವು ಘಳಿಗೆಗಳನ್ನು ಸುಖದಲ್ಲಿ ತೇಲಿಸುವ ಬದಲಿ ವ್ಯವಸ್ಥೆ ಸಾರ್ವತ್ರಿಕ ವಾಗಿದೆ.

ಎಡ್ಗರ್ ಕೇಸಿ (Edger Cayce) ೫೦,೦೦೦ ಕ್ರಿ.ಪೂ ದಿಂದ ೧೦,೦೦೦ ಕ್ರಿ.ಪೂ. ಕಾಲದಲ್ಲಿ ಈಗಿನ ಮೆಕ್ಸಿಕೊ ಸಮುದ್ರದ ಬಳಿ ಇದ್ದ ಅಟ್ಲಾಂಟಿಕ್ ಜನಾಂಗದ ಬಗ್ಗೆ ಹೇಳುತ್ತಾನೆ. ಅವರೆಲ್ಲ ನಮಗಿಂತಲೂ ಹೆಚ್ಚು ವೈಜ್ಞಾನಿಕವಾಗಿ ಮುಂದುವರೆದು ಎಲ್ಲ ಸವಲತ್ತುಗಳನ್ನು ಹೊಂದಿರುವ ನಾಗರಿಕತೆಯನ್ನು ಸೃಷ್ಟಿಸಿದ್ದ ರೆಂದು ಹೇಳುತ್ತಾನೆ. ಅವರು ಸ್ವೇಚ್ಛಾಚಾರಿಗಳೂ, ವಿಲಾಸಿಗಳಾಗಿ ದ್ದರು. ಸ್ವವ್ಯಕ್ತಿ ಸ್ವಾತಂತ್ರ್ಯವನ್ನು ಕೊನೆಗೆ ದುರ್ಬಳಕೆ ಮಾಡಿ ದುರ್ಬಲರಾಗಿ ಯಾದವರಂತೆ ಪರಸ್ಪರ ಹೊಡೆದಾಡಿ ನಾಶವಾದ ರೆಂದು ತಿಳಿಸುತ್ತಾನೆ. ಇವರೇ ಮತ್ತೆ ಈ ವೈಜ್ಞಾನಿಕ ಜಗತ್ತಿನಲ್ಲಿ ಮತ್ತೆ ಹುಟ್ಟಿ ಬಂದಿದ್ದಾರೆ. ಅವರು ಮಾಡಿದ್ದನ್ನು ನಾವು ಪುನರಾ ವರ್ತಿಸಿದರೆ ಅದೇ ಗತಿ ನಮಗೂ ಆದೀತೆಂದು ಎಚ್ಚರಿಸುತ್ತಾನೆ.

### ಬಾಹ್ಯಸುಖದ ನಿಜವಾದ ಮುಖ, ಸುಖದ ಸ್ವಲ್ಪತನ ಮತ್ತು ದುಃಖದ ಹಿರಿತನ

ಇಂತಹ ಸುಖ ಸಂಪತ್ತುಗಳ ಅಮಲಿನಲ್ಲಿ ಮನುಷ್ಯ ತೇಲುತ್ತಾ ಎಲ್ಲವನ್ನೂ ಗಳಿಸಿದಂತಾಗುತ್ತದೆಯೇ ಎನ್ನುವ ಗಂಭೀರ ಪ್ರಶ್ನೆ ಸಹಜವಾಗಿ ಉದ್ಭವವಾಗಬಹುದು. ಮನುಷ್ಯನೆಂಬ ವಿಶಿಷ್ಟ ಜಂತುವಿನ ಆಯಾಮ ಕೇವಲ ಇಷ್ಟೇ ಅಲ್ಲದೆ ಇನ್ನೂ ಆಳವಾದ, ವಿಸ್ತಾರವಾದ ಸ್ತರದಲ್ಲಿಯೂ ಇದೆ. (Man has higher dimension.) ಆಗಿನ ಕಾಲದ ಸ್ವರ್ಗಾದಿಗಳ ಕಲ್ಪನೆ ಇಂದು ಭೂಮಿಯಲ್ಲಿಯೇ ಆವಿರ್ಭವಿಸುತ್ತಿವೆಯೋ ಎನಿಸುತ್ತದೆ. ಉದಾಹರಣೆಗೆ ಇಂದಿನ 7 star ಹೋಟೆಲ್ಲುಗಳಲ್ಲಿ ಸ್ವರ್ಗದ ಕಲ್ಪನೆಯ ಸಾಕಾರವೇ ಇದೆ. ಅದು ಮನುಷ್ಯರನ್ನು ತೃಪ್ತರನ್ನಾಗಿ ಸುವ ಸಮಯದಲ್ಲಿ ವಸ್ತುಗಳ ದಾಸರನ್ನಾಗಿ ಮಾಡಿ ಅವನನ್ನು ದುರ್ಬಲಗೊಳಿಸುತ್ತವೆ ಎಂದು ನಮ್ಮ ಶಾಸ್ತ್ರಗಳು ಈಗಾಗಲೇ ಹೇಳಿವೆ. ಆದ್ದರಿಂದ ಈ ಜಗತ್ತು ಅದರ ಸುಖಗಳು ಕೊನೆಗೆ ದುಃಖವನ್ನು ನೀಡುತ್ತವೆ ಎಂದು ನಮ್ಮ ಶಾಸ್ತ್ರಾಂಗಗಳು ದುಃಖಕ್ಕೆ ಹೆಚ್ಚು ಒತ್ತು ನೀಡಿದವು. ಅದಕ್ಕಾಗಿಯೇ ಕುಂತಿಯಷ್ಟು ಕಷ್ಟ ಪಟ್ಟವರಾರು ಎಂಬ ನಾಣ್ಣುಡಿ ಇದೆ. ಅವಳು ಕೊನೆಗೆ ಕೃಷ್ಣನನ್ನು ಪ್ರಾರ್ಥಿಸಿದ್ದಾದರೂ ಏನು?

ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗದ್ಗುರೋ।
ಭವತೋ ದರ್ಶನಂ ಯತ್ಸ್ಯಾದಪುನರ್ಭವದರ್ಶನಂ॥

*(ಭಾಗವತ. ೧.೮.೨೫)*

'ಹೇ ಜಗದ್ಗುರೋ, ತೊಂದರೆಗಳು ಸದಾ ಅಲ್ಲಲ್ಲಿರಲಿ. ಇದರಿಂದ ನಿನ್ನ ದರ್ಶನ ಮತ್ತೆ ಮತ್ತೆ ಆಗುತ್ತದೆ ಮತ್ತೆ ಹುಟ್ಟು ಸಾವೆಂಬ ಭವದರ್ಶನವಾಗುವುದಿಲ್ಲ.'

ಭಗವಾನ್ ಗೌತಮ ಬುದ್ಧನು ರಾಜಮನೆತನದಲ್ಲಿ ಹುಟ್ಟಿದನು. ಅವನ ತಂದೆ ತನ್ನ ಮಗ ಸಂನ್ಯಾಸಿಯಾಗುವನು ಎಂಬ ಭವಿಷ್ಯವಾಣಿಯನ್ನು ತಪ್ಪಿಸಲು ಅರಮನೆಯ ಆವರಣದಲ್ಲಿ ಸಕಲ ವ್ಯವಸ್ಥೆಯನ್ನೂ ಕಲ್ಪಿಸಿ, ಉತ್ತಮ ಕುಲವಧುವಾದ ಯಶೋಧರೆಯನ್ನು ಸೊಸೆಯನ್ನಾಗಿ ಮಾಡಿಕೊಂಡನು. ಅವರಿಬ್ಬರಿಗೆ ಸುಂದರವಾದ ರಾಹುಲನೆಂಬ ಪುತ್ರಪ್ರಾಪ್ತಿಯಾಯಿತು. ಇಂತಹ ಕಷ್ಟಲೇಶವೂ ಇಲ್ಲದ ಸುಖಸಾಗರದಲ್ಲಿಯೂ ಬುದ್ಧನು ಗಂಭೀರವಾಗಿ ಜೀವನದ ನಶ್ವರತೆ ಮತ್ತು ಶಾಶ್ವತ ಸುಖದೆಡೆಗೆ ಚಿಂತಿಸುತ್ತಿದ್ದನು. ಅರಮನೆಯಿಂದ ಹೊರನಡೆದಾಗ ಕಂಡ ಮೂರು ದುಃಖ ಸನ್ನಿವೇಶಗಳು ಅವನು ಸಂಸಾರ ಸುಖವನ್ನು ತ್ಯಜಿಸಲು, ದುಃಖವನ್ನು ದೂರಮಾಡಲೋಸುಗ ಅನ್ವೇಷಣೆಗೆ ಹೊರಡಲು ಸಾಕಾಯಿತು.

## ಆಧುನಿಕ ಜಾಡಿನಲ್ಲಿಯೇ ಆಧುನಿಕ ಜೀವನ ವಿಮರ್ಶೆ ಮತ್ತು ಕುಟುಂಬದಲ್ಲಿ ಸಾಧನಾ ಸೌಕರ್ಯ

ಆಧುನಿಕತೆಯು ಕುಟುಂಬದ ವ್ಯಾಖ್ಯಾನವನ್ನು ಬದಲು ಮಾಡಿದೆ. ಹಿಂದಿನ ಕಾಲದಲ್ಲಿ ಒಂದು ವಿವಾಹವು ಎರಡು ವಂಶಗಳನ್ನು ಬೆಸೆಯುತ್ತಿತ್ತು. ವಿವಾಹವು ವೈಯಕ್ತಿಕ ಸುಖಕ್ಕಾಗಿ ಸೀಮಿತವಾಗಿರದೆ, ಕುಟುಂಬಕ್ಕಾಗಿ, ಸಮಾಜಕ್ಕಾಗಿ ರಾಷ್ಟ್ರನಿರ್ಮಾಣಕ್ಕಾಗಿಯೂ ನಮ್ಮ ಯೋಗದಾನವಿದೆ ಎಂಬ ಉನ್ನತ ವಿಚಾರಗಳಿಂದ ಕೂಡಿತ್ತು. ಅದು ಧಾರ್ಮಿಕ ಮತ್ತು ವಂಶಿಕ ಆಚರಣೆಗಳನ್ನು ಅಳವಡಿಸಿಕೊಂಡು, ಸಾರ್ಥಕತೆಯನ್ನು ಕಂಡುಕೊಳ್ಳಲು ಇಡುವ ಹೆಜ್ಜೆಗಳು ಎಂಬುದು ನಮ್ಮ ಪೂರ್ವಜರ ಚಿಂತನೆಯಾಗಿತ್ತು. ಒಂದು ವಿವಾಹವೆಂದರೆ, ಕೇವಲ ಪುರುಷ-ಸ್ತ್ರೀಯರ ಭೌತಿಕ ಸಂಬಂಧವಷ್ಟೆ ಅಲ್ಲದೆ ಎರಡು ವಂಶಗಳ ಸಂಸ್ಕೃತಿ, ರೀತಿ ರಿವಾಜು, ಮೌಲ್ಯಗಳನ್ನು ಬೆಸೆಯುವ ಮಾಧ್ಯಮ. ಅವರ ಸಂತಾನವು ಎರಡೂ ಕಡೆಯ ರಕ್ತವನ್ನೂ, ಮೌಲ್ಯಗಳನ್ನೂ ತನ್ನ ಸ್ವಭಾವವನ್ನಾಗಿಸಿಕೊಳ್ಳುತ್ತದೆ. ಆನುವಂಶಿಕತೆ ಮತ್ತು ಕುಟುಂಬ ವಾತಾವರಣಗಳು (Genetical and Environmental) ಹೊಸ ಪೀಳಿಗೆಯನ್ನು ನಿರ್ಮಾಣ ಮಾಡುತ್ತದೆ. ಈ ಒಂದು ಭಾವನಾ ಸಂಬಂಧ ಪರಸ್ಪರ ಪ್ರೀತಿ ಮತ್ತು ರಕ್ತ ಸಂಬಂಧದವರಿಗಾಗಿ ಯಾವ ತ್ಯಾಗಕ್ಕೂ ಸಿದ್ಧವಾದ ಬಲವಾದ ಸಂಬಂಧವನ್ನು ವರ್ಧಿಸುತ್ತದೆ. ಇವುಗಳನ್ನು ನಾವು ನಮ್ಮ ರಾಮಾಯಣ, ಮಹಾಭಾರತದಂತಹ ಇತಿಹಾಸ ಮತ್ತು ಪುರಾಣಗಳಲ್ಲಿ ವಿಪುಲವಾಗಿ ಕಾಣುತ್ತೇವೆ. ಮುಂದೆ ಹುಟ್ಟುವ ಮಕ್ಕಳ ಇಹ-ಪರ ಶ್ರೇಯೋಭಿವೃದ್ಧಿಗಾಗಿ, ಮತ್ತು ಅವರು ಸಚ್ಚಾರಿತ್ರ್ಯ ವ್ಯಕ್ತಿಗಳಾಗಿ, ವಂಶೋದ್ಧಾರಕರಾಗಿ, ಕೀರ್ತಿವಂತರಾಗಿ, ಧಾರ್ಮಿಕರಾಗಿ ಬಾಳಬೇಕೆಂಬ ಆಶಯದಿಂದ ತಮ್ಮ ವೈಯಕ್ತಿಕ ಉದ್ಧಾರ ಮತ್ತು ಸುಖವನ್ನು ಬದಿಗಿಟ್ಟು, ಮುಂದಿನ ಪೀಳಿಗೆಗಾಗಿ ಮಾಡುವ ತ್ಯಾಗವೇ ವಿವಾಹದ ಉದ್ದೇಶ. ಇಂದ್ರಿಯ ಸುಖವನ್ನು ಗೌಣವಾಗಿಸಿಕೊಂಡು ಬಾಳಿದ ಗೃಹಸ್ಥರ ತ್ಯಾಗದಿಂದ ಶತಮಾನ ಶತಮಾನಗಳು ಧರ್ಮ, ಸತ್ಯ, ನೈತಿಕತೆ ಮುಂತಾದ ಮಹಾಗುಣವನ್ನು ಹೊಂದಿರುವ ಸಮಾಜವನ್ನು ಕಟ್ಟಲು ಸಾಧ್ಯವಾಯಿತು. ಅನೇಕ ವಿದೇಶೀಯರ ಆಕ್ರಮಣದಿಂದ ಉಂಟಾದ ರಾಜಕೀಯ, ಆರ್ಥಿಕ ದುರ್ಬಲತೆಯ ಮಧ್ಯೆಯೂ ಧರ್ಮವನ್ನು ಹಿಡಿದಿಟ್ಟಿರುವ ವೀರ್ಯ ಶೌರ್ಯ ಸಾಮರ್ಥ್ಯ ನಮ್ಮ ದೇಶದಲ್ಲಿ ಉಳಿದುಕೊಂಡಿತು. ಯಾವುದೇ ಯಶಸ್ಸು ತ್ಯಾಗವಿಲ್ಲದೇ ಸಾಧ್ಯವಿಲ್ಲ. ಅಂತಹ ಪೂರ್ವಜರ ಗಟ್ಟಿತನದಿಂದ, ನಮ್ಮ ಸಂಸ್ಕೃತಿ ಆಚರಣೆಯ ಸದೃಢವಾದ ಸ್ತಂಭದಿಂದ ಎಂತಹ ಬಿರುಗಾಳಿಗೂ ಬಾಗದೆ ನಮ್ಮ ದೇಶ ಉಳಿದಿತ್ತು. ದುರದೃಷ್ಟವೆಂದರೆ ಇಂತಹ ಉದಾತ್ತ ಫಸಲಿನೊಡನೆ ಕಳೆಯಂತೆ, ಅನವಶ್ಯಕವಾದ ಅಸ್ಪೃಶ್ಯತೆ, ಸ್ತ್ರೀ ಅಸಮಾನತೆ, ಸತಿ ಸಹಗಮನ, ಪಾಶ್ಚಿಮಾತ್ಯ ಖಂಡದಲ್ಲಿ ಅನ್ಯಮತ ದ್ವೇಷ, ಬಲವಂತ ಮತಾಂತರ, witch burning, ಮುಂತಾದ ಅಮಾನವೀಯ ವಾದ ಆಚರಣೆಯು ಕಾಲಕ್ರಮೇಣ ಹೆಣೆದುಕೊಂಡವು. ಈ ವಿಷವೃಕ್ಷಕ್ಕೆ ಕುಠಾರಪ್ರಾಯವಾದ ಸುಧಾರಣೆ ಅನೇಕ ವಿದ್ಯಾವಂತರಿಂದ, ದಾರ್ಶನಿಕರಿಂದ ಎಲ್ಲೆಡೆಯೂ ಆಗಿದೆ.

ಹಳೆಯ ಹುಳುಕನ್ನು ಮತ್ತು ಹೊಸ ದುರಾಚರಣೆಗಳನ್ನೂ ತ್ಯಜಿಸಿ ಎರಡರಲ್ಲಿಯೂ ಇರುವ ಸದಾಚರಣೆಯನ್ನು ಹೊಸೆದು ನವೀನ ನಾಗರೀಕರಿಗೆ ಹೊಸ ಮಾದರಿಯನ್ನು ಕೊಡುವುದೇ ಇಂದು ನಾವು ಮುಖ್ಯವಾಗಿ ಮಾಡಬೇಕಾದ ಕೆಲಸ.

ಇಂದಿನ ಜನರಿಗೆ ವಿದ್ಯಾಭ್ಯಾಸ ಮತ್ತು ವಿಜ್ಞಾನದಿಂದ ಸ್ವಾತಂತ್ರ್ಯ ಸಿಕ್ಕಿದೆ, ವಿವೇಚನಾ ಶಕ್ತಿಯು ಹೆಚ್ಚಿದೆ. ಈಗ ನಮಗೆ ಬೇಕಾಗಿರುವುದು ಈ ವಿವೇಚನಾ ಶಕ್ತಿಯ ಪ್ರಯೋಗ. ಮಾನವ ಜೀವನದ ಉದ್ದೇಶವಾದರೂ ಏನು? ತಮ್ಮ ಅಸಾಮಾನ್ಯ ವಿಶ್ಲೇಷಣೆಗೆ ಈ ಜಗತ್ತನ್ನು ಒಳಪಡಿಸಿ, ಅಂಟೂ ಅಂಟಿಕೊಳ್ಳದಂತೆ ಬಹುಮುಖ್ಯವಾಗಿರುವ ಮನಸ್ಸನ್ನು ತಿರುಗಿಸಿ, ಹೊರ ಪ್ರಲೋಭನೆಗಳನ್ನು ತೊರೆದು ಶಾಶ್ವತ ಶಾಂತಿಯೆಡೆಗೆ ಪ್ರಯತ್ನಿಸುವುದು.

ಆಧುನಿಕ ಜಗತ್ತು ಇತಿಹಾಸದಲ್ಲಿಯೇ ಮಾನವನಿಗೆ ಅತ್ಯಂತ ಅನುಕೂಲದ ವಾತಾವರಣವನ್ನು ಕಲ್ಪಿಸಿದೆ ಎಂಬುದು ನಿಸ್ಸಂದೇಹ. ಇಂತಹ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಸವಲತ್ತು, ಸಲಕರಣೆ, ಅನುಕೂಲ, ಅವಕಾಶವನ್ನು ನೀಡಿದೆ. ಅಪರಾಧವನ್ನು ಎಸಗಿದರೆ ಮಾತ್ರ ನಮ್ಮನ್ನು ಕಾನೂನು ಶಿಕ್ಷಿಸು

ತ್ತಿದೆಯೇ ಹೊರತು, ನೀತಿವಂತರು, ನಿರಪರಾಧಿಗಳು ಇಂದು ಶಿಕ್ಷೆಗೆ ಗುರಿಯಾಗುವುದು ಶತಾಂಶ ಕಡಿಮೆ. ಇಂತಹ ಒಂದು ಸದವಕಾಶವನ್ನು ಕೇವಲ ವೈಯಕ್ತಿಕ ಉನ್ನತಿ ಮತ್ತು ಬಾಹ್ಯ ವಿಕಾಸಕ್ಕಷ್ಟೇ ಸೀಮಿತವಾಗಿರಸದೇ ತಮ್ಮ ನೈಜಸ್ವರೂಪ ಮತ್ತು ಶಾಶ್ವತ ವಸ್ತುವಿನ ಅನ್ವೇಷಣೆಯಡೆಗೆ ಗಮನವನ್ನು ಹರಿಸಲೂ ಸಹ ಇಂದಿನ ದಿನವೇ ಸುದಿನವು. ಶುಭದಿನವು. ನಮ್ಮ ಬಳಿಯಿರುವ ಆರ್ಥಿಕ ವ್ಯವಸ್ಥೆ ಮತ್ತು ನಮ್ಮ ಮನೆಯಲ್ಲಿಯೇ ಕಡಿಮೆ ಜನರಿರುವುದರಿಂದ ಸಿಗುವ ಏಕಾಂತ, Simple living and high thinking ಗಳನ್ನು ಅಳವಡಿಸಿಕೊಳ್ಳಬಹುದು. ಬಾಹ್ಯ ಪ್ರಪಂಚದ ಪ್ರಲೋಭನೆಗಳಿಂದ ನಮ್ಮ ಮನಸ್ಸನ್ನು ವಿಮುಖರನ್ನಾಗಿಸಿಕೊಂಡು ಇಷ್ಟು ದಿನ ಬಾಹ್ಯ ಸಂಶೋಧನೆಗಳಿಂದ ಪಡೆದ ವಿಶ್ಲೇಷಣಾ ಶಕ್ತಿಯ ಜಾಡನ್ನೇ ಆಂತರಿಕ ಸಂಶೋಧನೆಯ ಅಂಗಳಕ್ಕೆ ಪ್ರಯೋಗಿಸಿದರೆ ಮಹತ್ತರವಾದ, ಶಾಶ್ವತವಾದ ಲಾಭವನ್ನು, ನಮ್ಮ ನಿಜವಾದ ಗುರಿಯನ್ನೂ ಹೊಂದಬಹುದು. ಇಷ್ಟು ದಿನ ಅನ್ನ, ಸ್ತ್ರೀ, ಪಾನ, ವಿನೋದಕ್ಕಾಗಿ ಓದಿದೆ, ದುಡಿದೆ, ಹಣ, ಮನೆ ಮಾಡಿದೆ. ಇಂದ್ರಿಯಸುಖಕ್ಕಾಗಿ ಅನೇಕ ವಸ್ತುಗಳನ್ನು ಅನೇಕ ಜನರನ್ನು ಅವಲಂಬಿಸಿದೆ. ಇದರಿಂದ ನನಗಾಗಲಿ, ನನ್ನವರಿಗಾಗಲಿ, ಸಮಾಜಕ್ಕಾಗಲಿ ನಿಜವಾದ ಸುಖ ಸಿಕ್ಕಿದೆಯೆ? ತೃಪ್ತಿ ದೊರಕಿದೆಯೆ? ತೃಪ್ತಿ ಎಂದರೆ ಸುಖದ ಸಾರ್ಥಕತೆ. ಮತ್ತೆ ಬೇಕೆನಿಸುವುದಿಲ್ಲ. ಆದರೆ ಈ ಸುಖವೆಂಬುದು ಉಪ್ಪು ತಿಂದಂತೆ ಮತ್ತೆ ನೀರು ಕುಡಿಸುತ್ತಿದೆಯಲ್ಲ! ನಾವು ಎಲ್ಲವನ್ನೂ ಕೊನೆಗೆ ಧರ್ಮಗ್ರಂಥಗಳನ್ನೂ ಅತ್ಯಂತ ತೀವ್ರ ವಿಶ್ಲೇಷಣೆಗೆ ಒಳಪಡಿಸುತ್ತೇವೆ. ಆದರೆ ನಾವು ನಡೆಸುತ್ತಿರುವ ಈ ಆಧುನಿಕತೆಯ ಸೋಗಿನ ಹೀನ ಕೌಟುಂಬಿಕ ಜೀವನವನ್ನು ವಿಶ್ಲೇಷಣೆಗೆ ಒಳಪಡಿಸುತ್ತಿದ್ದೇವೆಯೆ? ಹಾಗೆ ಮಾಡಲು ಹೋಗಿ ಭಯದಿಂದ ಹೊರಬಂದು ಮುಚ್ಚಿಡುತ್ತಿದ್ದೇವೆ ಅಷ್ಟೆ.

### ಶಾಶ್ವತ ಪರಿಹಾರ

ಸ್ವಾಮಿ ವಿವೇಕಾನಂದರು ನೀಡಿರುವ ಉಪದೇಶಗಳನ್ನು ವಿಮರ್ಶಿಸಿದರೆ ಸಾಕು, ನಮ್ಮ ಈ ಎಲ್ಲ ಗೊಂದಲಗಳಿಂದ ಪಾರಾಗಿ ವ್ಯಕ್ತಿ ಮತ್ತು ಕುಟುಂಬಗಳ ಆದರ್ಶ ಹೇಗಿರಬೇಕೆಂಬ ಸ್ಪಷ್ಟ ಚಿತ್ರಣ ನಮಗೆ ದೊರೆಯುತ್ತದೆ.

ಮಾನವಕೋಟಿಯಲ್ಲಿ ಅತ್ಯಲ್ಪ ಮಂದಿಯಾದರೂ ತಮ್ಮ ಸ್ವಾರ್ಥ ಸಂಕುಚಿತ ಭಾವನೆ, ಅಲ್ಪಭಾವನೆ ಇವುಗಳನ್ನು ತ್ಯಜಿಸಲು ಸಿದ್ಧರಾದರೆ ಈ ಭೂಮಿ ನಾಳೆಯೇ ಸ್ವರ್ಗವಾಗುವುದು. ಯಂತ್ರಗಳಿಂದ ಮತ್ತು ಭೌತ ಜ್ಞಾನಾಭಿವೃದ್ಧಿಯಿಂದ ಇದು ಸಾಧ್ಯವಿಲ್ಲ. ಇವು ಕೇವಲ ನಮ್ಮ ದುಃಖವನ್ನು ಹೆಚ್ಚಿಸುತ್ತವೆ. ಇದು ಬೆಂಕಿಗೆ ತುಪ್ಪ ಹಾಕಿದಂತೆ. ಆತ್ಮಜ್ಞಾನದಿಂದ ಹೊರತಾದ ಎಲ್ಲ ಲೌಕಿಕ ಜ್ಞಾನವು ಸ್ವಾರ್ಥಿಯಾದ ಮನುಷ್ಯನು ತನ್ನ ಸ್ವಾರ್ಥವನ್ನು ನೀಗದೆ ಮತ್ತೊಬ್ಬನಿಗೆ ಸೇರಿದ ಆಸ್ತಿಯನ್ನು ಅಪಹರಿಸುವುದಕ್ಕಾಗಿ, ಮತ್ತೊಬ್ಬರ ರಕ್ತವನ್ನು ಹೀರುವುದಕ್ಕೆ ಒಂದು ಹೊಸ ಆಯುಧವಾಗಿ ಪರಿಣಮಿಸುವುದು.

''ಆಧುನಿಕ ಸಮಾಜದಲ್ಲಿ ಇದನ್ನು ಅನುಷ್ಠಾನಕ್ಕೆ ತರಬಹುದೆ? ಸತ್ಯವು ಯಾವ ಸಮಾಜಕ್ಕೂ ಅದು ಪುರಾತನವಾಗಲಿ, ಆಧುನಿಕವಾಗಲಿ, ಗೌರವ ಸಲ್ಲಿಸುವುದಿಲ್ಲ. ಸಮಾಜವು ಸತ್ಯಕ್ಕೆ ಮನ್ನಣೆಯನ್ನು ತೋರಬೇಕು, ಇಲ್ಲವೆ ಅಳಿಯಬೇಕು. ಸಮಾಜವು ಸತ್ಯಕ್ಕೆ ಹೊಂದಿಕೊಳ್ಳಬೇಕು, ಸತ್ಯವು ಸಮಾಜಕ್ಕೆ ಹೊಂದಿಕೊಳ್ಳುವುದಿಲ್ಲ. ಸತ್ಯವು ಸಮಾಜಕ್ಕೆ ಹೊಂದಿಕೊಳ್ಳದೆ ಇದ್ದರೆ, ಪರಮಸತ್ಯವನ್ನು ಅಳವಡಿಸಿಕೊಳ್ಳುವಂತಹ ಸಮಾಜವನ್ನು ನೀವು ನಿರ್ಮಿಸದೇ ಇದ್ದರೆ, ನಿಮ್ಮ ದೇಹಶಕ್ತಿಯನ್ನು ಮತ್ತು ಪಾಶ್ಚಾತ್ಯ ಸಂಸ್ಥೆಗಳ ಹಿರಿಮೆಯನ್ನು ಹೊಗಳಿ ಪ್ರಯೋಜನವೇನು? ಯಾವ ಸಮಾಜದಲ್ಲಿ ಶ್ರೇಷ್ಠ ಸತ್ಯಗಳು ಅನುಷ್ಠಾನವಾಗಬಲ್ಲದೋ ಅದೇ ಶ್ರೇಷ್ಠವಾದ ಸಮಾಜ... ಸ್ತ್ರೀಪುರುಷರೆ, ಎದ್ದು ನಿಲ್ಲಿ, ಈ ಆತ್ಮನಲ್ಲಿ ಶ್ರದ್ಧೆ ಇಡಿ, ಸತ್ಯವನ್ನು ನಂಬಿ, ಧೈರ್ಯವಾಗಿ ಅದನ್ನು ಅನುಷ್ಠಾನಕ್ಕೆ ತನ್ನಿ. ಪ್ರಪಂಚಕ್ಕೆ ಇಂತಹ ಧೈರ್ಯವುಳ್ಳ ಪುರುಷರು ನೂರಾರು ಸಂಖ್ಯೆಯಲ್ಲಿ ಬೇಕಾಗಿದ್ದಾರೆ.'' *(ಸ್ವಾಮಿ ವಿವೇಕಾನಂದರ ಕೃತಿ ಶ್ರೇಣಿ, ಸಂಪುಟ ೨, ಪು.೨೬ – ೨೭)*

''ಮಾನವನು ಇಂದ್ರಿಯಗಳನ್ನು ಬಲವಾಗಿ ಅಪ್ಪಿಕೊಂಡಿರುವನು. ತಾವು ಬದುಕಿ ಬಾಳುವ ಬಾಹ್ಯ ಜಗತ್ತು ಎಷ್ಟೇ ಸತ್ಯವೆಂದು ಭಾವಿಸಿದರೂ, ವ್ಯಕ್ತಿಯ ಹಾಗೂ ಜನಾಂಗದ ಜೀವನದಲ್ಲಿ ಒಂದು ಸಮಯ ಬರುವುದು. ಆಗ ಅನೈಚ್ಛಿಕವಾಗಿ ಇದು ನಿಜವೇ ಎಂಬ ಪ್ರಶ್ನೆ ಏಳುವುದು. ತನ್ನ ಇಂದ್ರಿಯಗಳು ನೀಡುವ ಅನುಭವಗಳು ಸತ್ಯವೇ ಎಂದು ಪ್ರಶ್ನಿಸುವುದಕ್ಕೆ ಒಂದು ಕ್ಷಣವೂ ದೊರಕದೆ, ಅನವರತ ಇಂದ್ರಿಯ ಭೋಗದಲ್ಲಿ ನಿರತನಾಗಿರುವವನಿಗೂ ಮೃತ್ಯು ಸನ್ನಿಹಿತವಾಗುವುದು... ಸುಖವಾಗಿರಬೇಕೆಂಬ ಆಸೆ ಬೇರೆ. ಅದಕ್ಕಾಗಿ ಪ್ರತಿಯೊಂದು ವಸ್ತುವಿನ ಹಿಂದೆಯೂ ಓಡುವೆವು. ಇಂದ್ರಿಯಗಳ ಬಾಹ್ಯ ಪ್ರಪಂಚದಲ್ಲಿ ಭ್ರಾಂತರಾಗಿ ಸ್ವೇಚ್ಛಾವಿಹಾರಿಗಳಾಗುವೆವು. ಪ್ರತಿಯೊಂದು ಇಂದ್ರಿಯಕ್ರಿಯೆಯೂ ಪ್ರತಿಕ್ರಿಯೆಯಲ್ಲಿ ಪರ್ಯವಸಾನವಾಗುವುದು. ಎಲ್ಲವೂ ಕ್ಷಣಿಕ. ಭೋಗ, ದುಃಖ, ಸುಖ, ಐಶ್ವರ್ಯ, ಅಧಿಕಾರ, ದಾರಿದ್ರ್ಯ ಮತ್ತು ನಮ್ಮ ಬಾಳೂ ಕೂಡ ಕ್ಷಣಿಕ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೨, ಪು. ೧೪, ೧೫)*

ಒಂದೆಡೆ ಐಶ್ವರ್ಯಕ್ಕಾಗಿ ಹಗಲು ರಾತ್ರಿಯೆನ್ನದೆ ಓದಿ, ಹಗಲು ರಾತ್ರಿಯೆನ್ನದೆ ದುಡಿದು ಬೆಂಡಾಗಿ, ಇನ್ನೊಂದೆಡೆ ಯಾವುದೇ ಕೌಟುಂಬಿಕ ವ್ಯವಸ್ಥೆಯನ್ನೂ ಪಾಲಿಸದೆ ಇಂದ್ರಿಯ ಸುಖವನ್ನು ಅರಸುತ್ತಾ ದೈಹಿಕವಾಗಿ, ಮಾನಸಿಕವಾಗಿ ದುರ್ಬಲರಾಗಿ, ಆತ್ಮಶಕ್ತಿಯನ್ನು ಕ್ಷೀಣಿಸುತ್ತಾ, ಅಲ್ಪ ದುಃಖವನ್ನೂ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಈ ಬುದ್ಧಿವಂತ ಜನರಿಗೆ


ಸ್ವಾಮಿ ವಿವೇಕಾನಂದರು ಮೇಲೆ ತಿಳಿಸಿರುವ ಉಪದೇಶವು ೨೧ನೇ ಶತಮಾನದ ಭವರೋಗಕ್ಕೆ ಔಷಧಿ. ನಮ್ಮ ಬೌದ್ಧಿಕ ಪ್ರಬುದ್ಧತೆಯ ಬೆಳಕನ್ನು ಸುಖವರೆಸುವ ಸವಲತ್ತಿನ ಸ್ವಲ್ಪತನವನ್ನೂ, ಇಂದ್ರಿಯ ಜಯದ ಸಾಮರ್ಥ್ಯದ ಸಾರ್ಥಕತೆಯ ತುಲನೆ ಮಾಡುವ ಕಾರ್ಯಕ್ಕೆ ಪ್ರಯೋಗಿಸಬೇಕು.

ಬದಲಾಗುತ್ತಿರುವ ಕೌಟುಂಬಿಕ ಸನ್ನಿವೇಶಗಳಲ್ಲಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ದುಡಿಯುತ್ತಾ ಉಳಿದ ಸಮಯದಲ್ಲಿ ವಾರಾಂತ್ಯ, ಮದುವೆ, ಮುಂಜಿ, ಪಾರ್ಟಿ, ಪಬ್ ಮುಂತಾದವುಗಳಿಗೆ ಹೋಗದೆ ಉಪಾಸನೆ, ಸದ್ವಿಚಾರ, ಸದ್ಗ್ರಂಥ ಪಠಣ, ಯೋಗಾಭ್ಯಾಸ, ಧ್ಯಾನ, ಮುಂತಾದ ಸದಾಚಾರಗಳನ್ನು ಬೆಳೆಸಿಕೊಳ್ಳುವ ಪ್ರಯತ್ನವನ್ನೂ ಆರಂಭಿಸಬೇಕು. ಇಂದು ಒಂದು ವಿಶಾಲ ಮನೆಯಲ್ಲಿ ಇಬ್ಬರು ಒಟ್ಟಿಗಿರುವ ಸಮಯ ಅತಿ ಕಡಿಮೆ. ಇಂತಹ ಏಕಾಂತವನ್ನು ಸದುಪಯೋಗ ಪಡಿಸುವುದಕ್ಕಿಂತ ಒಳ್ಳೆಯ ಅವಕಾಶ ಎಲ್ಲಿದೆ? ಶ್ರೀರಾಮಕೃಷ್ಣರು ''ಮನೆಯಲ್ಲಿ ಬನದಲ್ಲಿ ಮೂಲೆಯಲ್ಲಿ'' ಎಂದು ಹೇಳುತ್ತಿದ್ದರು. ವಿದ್ಯಾಭ್ಯಾಸ ಮತ್ತು ಉದ್ಯೋಗದಲ್ಲಿ ಶ್ರಮವನ್ನು ಹಾಕುವ ಅಭ್ಯಾಸವುಳ್ಳ ಈಗಿನ ಕಾಲದ ಜನರಿಗೆ ಅದೇ ಶ್ರಮವನ್ನು ಅಂತರ್ ಪ್ರಯೋಗಕ್ಕೆ ತಿರುಗಿಸುವುದು ಅಷ್ಟು ಕಷ್ಟವಲ್ಲ. ಅವಿವಾಹಿತರಾಗಿದ್ದು ವಿವೇಕಾನಂದರು ತಿಳಿಸಿದಂತೆ ಇಂದ್ರಿಯ ಸುಖದಲ್ಲಿ ವಿಶ್ಲೇಷಿಸಿ ವಿವಾಹದ ಜಂಜಾಟಕ್ಕೆ ಕೈ ಹಾಕದೆ ಇರಬಹುದು. ವಿವಾಹವಾಗಿದ್ದಲ್ಲಿ ಸ್ವಾತಂತ್ರ್ಯ ಅಭಿರುಚಿಗೆ ಈಗಿನ ಕಾಲದಲ್ಲಿ ಹೆಚ್ಚು ಅವಕಾಶವಿರುವುದರಿಂದ ಒಂದು ಒಡಂಬಡಿಕೆಗೆ ಬದ್ಧರಾಗಿ ಆಂತರಿಕ ಜೀವನಕ್ಕೆ ಹೆಚ್ಚು ಒತ್ತು ಕೊಡುವ ಪತಿ-ಪತ್ನಿಯರಾಗಿ ಬಾಳಬಹುದು. ಪ್ರಬುದ್ಧ ವಯಸ್ಕರಾದವರಿಗೆ ವಿಪುಲವಾಗಿ ಪಿಂಚಣಿ ಬರುವುದರಿಂದ, ಜೀವನದ ಸುಖದ ಅರಸುವಿಕೆಗೆ ಶಾಶ್ವತವಾದ ಪೂರ್ಣವಿರಾಮ ಹಾಕಿ ವಾನಪ್ರಸ್ಥಿಗಳಂತೆ ದಿವ್ಯ ಜೀವನವನ್ನು ನಡೆಸುತ್ತಾ ಭಗವತ್ಸಾಕ್ಷಾತ್ಕಾರ ಅಥವಾ ಮುಕ್ತಿಯನ್ನು ಪಡೆಯಲು ತೀವ್ರ ಸಾಧನೆಗೆ ಸಂಕಲ್ಪ ಮಾಡಬಹುದು. ಇಂತಹ ಕಠೋರ ಸಂಕಲ್ಪದಲ್ಲಿ ಎಡವಿದರೂ **'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್। ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ'** ಎಂಬ ಭಗವಂತನ ನುಡಿಯಂತೆ ನಮ್ಮನ್ನು ಆ ಶಕ್ತಿಯೇ ಬಿದ್ದರೆ ಧೂಳು ರಕ್ತವನ್ನು ಒರೆಸಿ ಕೈ ಹಿಡಿದು ಮುನ್ನಡೆಸಿ ತನ್ನವನನ್ನಾಗಿ ಮಾಡಿಕೊಳ್ಳುತ್ತದೆ. ಅಂತಹ ಗುರುಶಕ್ತಿ ಸ್ವರೂಪರಾದ ದಿವ್ಯತ್ರಯರ ಜೀವನ ಉಪದೇಶಗಳೇ ನಮ್ಮ ಕಯ್ಯಾಸರೆ ಮತ್ತು ದಾರಿದೀಪ.


With Best Compliments From

**NANDU CHEMICAL INDUSTRIES**

N-12, INDUSTRIAL ESTATE, GOKUL ROAD
HUBLI - 580 030 (KARNATAKA)



Manufacturers & Exporter of Active Pharmaceuticals Ingredients
Winner of Export Excellence Award 2011